**ದಿನಾಂಕ:30.12.2013ರಂದು ಮಧ್ಯಾಹ್ನ 12.00 ಗಂಟೆಗೆ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೌನ್ಸಿಲ್ ಸಭಾಂಗಣದಲ್ಲಿ ನಿರ್ದೇಶಕರು, ಮಿಮ್ಸ್ ಮಂಡ್ಯರವರ ಅಧ್ಯಕ್ಷತೆಯಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳ ಸಭೆಯ ನಡಾವಳಿಗಳು.**

ನಿರ್ದೇಶಕರು ಮೇಲ್ಕಂಡ ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳನ್ನು ಸಭೆಗೆ ಸ್ವಾಗತಿಸಿದರು.

1) ಸರ್ಕಾರದಿಂದ ಸಂಸ್ಥೆಯ ಕ್ಯಾನ್ಸರ್ ಘಟಕಕ್ಕೆ ರೂ. 45.00 ಕೋಟಿ ಅನುದಾನವು ಬಿಡುಗಡೆಯಾಗಿದ್ದು ಸದರಿ ವಿಭಾಗಕ್ಕೆ ಸಂಬಂಧಪಟ್ಟಂತೆ ಅನುದಾನವನ್ನು ಉಪಯೋಗಿಸಿಕೊಳ್ಳುವುದಾಗಿ ವಿಭಾಗದ ಮುಖ್ಯಸ್ಥರಿಗೆ ಹಾಗೂ ಸಭೆಯ ಗಮನಕ್ಕೆ ನಿರ್ದೇಶಕರು ತಿಳಿಸಿದರು.

2) ಸಂಸ್ಥೆಗೆ ಸಂಬಂಧಪಟ್ಟಂತೆ ಇತ್ತೀಚಿಗೆ ನಡೆದ ಆರ್ಥಿಕ ಸಮಿತಿಯ ಬಗ್ಗೆ ಸಭೆಯಲ್ಲಿ ತಿಳಿಸಿ ಆರ್ಥಿಕ ಸಮಿತಿ ಸಭೆಯಲ್ಲಿ ಕೆಲವು ವಿಷಯಗಳನ್ನು ಚರ್ಚಿಸಿ ತಿರ್ಮಾನ ತೆಗೆದುಕೊಂಡಿರುವ ವಿಷಯಗಳ ಕೆಲಸ ಕಾರ್ಯಗಳನ್ನು ಅತಿ ಶೀಘ್ರದಲ್ಲಿಯೆ ಕೈಗೆತ್ತಿಕೊಳ್ಳುವುದಾಗಿ ನಿರ್ದೇಶಕರು ಸಭೆಯಲ್ಲಿ ತಿಳಿಸಿದರು.

3) ಪರೀಕ್ಷಾ ಸಮಯದಲ್ಲಿ ಬೇರೆ ಸಂಸ್ಥೆಗಳಿಂದ ನಮ್ಮ ಸಂಸ್ಥೆಗೆ ಬಂದಂತಹ ಪರೀಕ್ಷಾ ವೀಕ್ಷಕರುಗಳಿಗೆ ಸಂಸ್ಥೆಯ ವತಿಯಿಂದ ಪರೀಕ್ಷೆಗೆ ಸಂಬಂಧಪಟ್ಟಂತಹ ಭತ್ಯೆಗಳನ್ನು ಪಾವತಿಸುತ್ತಿದ್ದು ಇತರೆ ಯಾವುದೇ ಖರ್ಚುವೆಚ್ಚಗಳನ್ನು ಸಂಸ್ಥೆಯ ಕಡೆಯಿಂದ ಕೊಡಲು ಅವಕಾಶವಿರುವುದಿಲ್ಲ. ಆದುದರಿಂದ ಸಂಬಂಧಪಟ್ಟ ವಿಭಾಗದವರು ಅವರ ಖರ್ಚುವೆಚ್ಚಗಳನ್ನು ಭರಿಸುವಂತೆ ನಿರ್ದೇಶಕರು ಮುಖ್ಯಸ್ಥರುಗಳಿಗೆ ಸೂಚಿಸಿದರು.

4) ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಲವು ವೈದ್ಯರುಗಳು ಆಸ್ಪತ್ರೆಗೆ ಬಂದಂತಹ ರೋಗಿಗಳನ್ನು ಉತ್ತಮ ರೀತಿಯಲ್ಲಿ ಚಿಕಿತ್ಸೆ ನೀಡದೆ ಖಾಸಗಿ ಆಸ್ಪತ್ರೆಗಳಿಗೆ ಬರುವಂತೆ ಹೇಳಿ ಸಂಸ್ಥೆಗೆ ಒಳರೋಗಿ ದಾಖಲಾತಿಯನ್ನು ಕಡಿಮೆ ಮಾಡುತ್ತಿರುವ ಬಗ್ಗೆ ಇಲಾಖೆ ಕಾರ್ಯದರ್ಶಿಯವರ ಗಮನಕ್ಕೆ ಬಂದಿದ್ದು, ಇನ್ನು ಮುಂದೆ ಇದೇ ರೀತಿ ಮುಂದುವರೆದರೆ ಸಂಬಂಧಪಟ್ಟವರಿಗೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ಸೂಚಿಸಿರುವ ಮೇರೆಗೆ ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರು ಇನ್ನು ಮುಂದೆ, ಒಳರೋಗಿಗಳನ್ನು ದಾಖಲಾತಿ ಮಾಡಿಕೊಂಡು ಉತ್ತಮ ರೀತಿಯಲ್ಲಿ ಚಿಕಿತ್ಸೆ ದೊರೆಯುವಂತೆ ನೋಡಿಕೊಳ್ಳಲು ನಿರ್ದೇಶಕರು ಸೂಚಿಸಿದರು.

5) ಇಲಾಖೆ ಕಾರ್ಯದರ್ಶಿಯವರು ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳಿಗೆ ಸಂಬಂಧಿಸಿದಂತೆ ಹಿಂದಿನ 02 ವರ್ಷಗಳಲ್ಲಿ ಧೀರ್ಘ ರಜೆಯನ್ನು (ಒಂದು ವಾರ ಮೇಲ್ಪಟ್ಟು) ತೆಗೆದುಕೊಂಡಿರುವವರ ಪಟ್ಟಿಯನ್ನು ಹಾಗೂ ಒಳರೋಗಿ ದಾಖಲಾತಿ ಮಾಹಿತಿಯನ್ನು ಕಳುಹಿಸಿಕೊಡುವಂತೆ ಸೂಚಿಸಿರುವ ಬಗ್ಗೆ ಸಭೆಯಲ್ಲಿ ನಿರ್ದೇಶಕರು ತಿಳಿಸಿದರು.

6) ಸಂಸ್ಥೆಯ ಜಿಲ್ಲಾ ಆಸ್ಪತ್ರೆಯಿಂದ ಬೋಧಕ ಆಸ್ಪತ್ರೆಯಾಗಿ ಮಾರ್ಪಟ್ಟಿದ್ದರು ಸಹ ಪ್ರತಿ ಮಾಹೆಯಿಂದ ಒಳರೋಗಿ ದಾಖಲಾತಿಯು ಕಡಿಮೆಯಾಗುತ್ತಿರುವ ಬಗ್ಗೆ ಹಾಗೂ ಬೋಧಕ ಆಸ್ಪತ್ರೆಗಳಲ್ಲಿ ಕೆಲವು ವೈದ್ಯರುಗಳು ರೋಗಿಗಳ ಹತ್ತಿರ ಲಂಚವನ್ನು ತೆಗೆದುಕೊಳ್ಳುತ್ತಿರುವ ವಿಷಯವನ್ನು ಚರ್ಚಿಸಿ ಇನ್ನು ಮುಂದೆ ಅದೇ ರೀತಿ ಮುಂದುವರೆದಲ್ಲಿ ಸಂಬಂಧಪಟ್ಟ ವೈದ್ಯರುಗಳ ವಿರುದ್ಧ ನಿಯಾಮಾನುಸಾರ ಕ್ರಮಕೈಗೊಳ್ಳುವಂತೆ ತಿಳಿಸಿದರು. ಇನ್ನು ಮುಂದೆ ಆ ರೀತಿ ನಡೆಯದಂತೆ ನೋಡಿಕೊಳ್ಳಲು ವೈದ್ಯಕೀಯ ಅಧೀಕ್ಷಕರಿಗೆ ಹಾಗೂ ವಿಭಾಗಗಳ ಮುಖ್ಯಸ್ಥರುಗಳಿಗೆ ಸೂಚಿಸಿದರು.

7) ವಿಭಾಗಗಳಲ್ಲಿ ಚಲನವಲನ ವಹಿಯನ್ನು ಇಡುವಂತೆ ಈಗಾಗಲೇ ಹಲವಾರು ಬಾರಿ ಸುತ್ತೋಲೆಗಳನ್ನು ಹೊರಡಿಸಿದ್ದರೂ ಸಹ ಕೆಲವೊಂದು ವಿಭಾಗಗಳಲ್ಲಿ ಚಲನವಲನ ವಹಿಯನ್ನು ಇಟ್ಟಿಲ್ಲದಿರುವ ಬಗ್ಗೆ ತಿಳಿಸಿ ಇನ್ನು ಮುಂದೆ ಕಡ್ಡಾಯವಾಗಿ ಇಡುವಂತೆ ಹಾಗೂ ಹೊರಗೆ ತೆರಳಿದ ಸಂದರ್ಭದಲ್ಲಿ ಅದರಲ್ಲಿ ನಮೂದಿಸುವಂತೆ ಎಲ್ಲಾ ವಿಭಾಗದ ಪ್ರಾಧ್ಯಾಪಕರು/ಮುಖ್ಯಸ್ಥರಗಳಿಗೆ ಸೂಚಿಸಿದರು.

8) ಸಂಸ್ಥೆಯ ಕ್ಲಿನಿಕಲ್ ವಿಭಾಗದ ವೈದ್ಯರುಗಳು ತರಗತಿಗಳನ್ನು 8.00 ಗಂಟೆಗೆ ತೆಗೆದುಕೊಳ್ಳುವ ಬದಲು 8.30ಕ್ಕೆ ತೆಗೆದುಕೊಳ್ಳುತ್ತಿರುವ ಬಗ್ಗೆ ಈಗಾಗಲೇ ಹಲವಾರು ಬಾರಿ ಹೇಳಿದ್ದರೂ ಸಹ ತರಗತಿಗಳನ್ನು ತಡವಾಗಿ ತೇಗೆದುಕೊಳ್ಳುತ್ತಿರುವದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿರುವುದರಿಂದ ಇನ್ನು ಮುಂದೆ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರುಗಳು ಕಡ್ಡಾಯವಾಗಿ ತರಗತಿಗಳನ್ನು ಸರಿಯಾದ ಸಮಯಕ್ಕೆ ತೆಗೆದುಕೊಳ್ಳುವಂತೆ ತಮ್ಮ ವಿಭಾಗದ ವೈದ್ಯರುಗಗಳಿಗೆ ತಿಳಿಸಲು ಮತ್ತೊಮ್ಮೆ ನಿರ್ದೇಶಕರು ಸೂಚಿಸಿದರು.

9) ಸಂಸ್ಥೆಯ ವಿದ್ಯಾರ್ಥಿಗಳ ಫಲಿತಾಂಶ ಕಡಿಮೆ ಬರುತ್ತಿದ್ದು, ಕ್ಲಿನಿಕಲ್ ವಿಭಾಗದ ವೈದ್ಯರುಗಳು ಇದನ್ನು ಗಮನದಲ್ಲಿಟ್ಟಿಕೊಂಡು ವಿದ್ಯಾರ್ಥಿಗಳಿಗೆ ಉತ್ತಮ ರೀತಿಯಲ್ಲಿ ಫಲಿತಾಂಶ ಬರುವಂತೆ ತರಗತಿಗಳನ್ನು ತೆಗೆದುಕೊಳ್ಳುವಂತೆ ಕ್ರಮವಹಿಸಲು ಎಲ್ಲಾ ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

10) ಬೋಧಕ ಆಸ್ಪತ್ರೆಗೆ ಬರುವಂತಹ ಒಳರೋಗಿಗಳು ಹಾಗೂ ಹೊರರೋಗಿಗಳ ಪ್ರತಿ ಮಾಹೆಯ ಅಂಕಿ ಅಂಶಗಳನ್ನು ಕ್ರೂಢೀಕರಿಸಿ ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ತಮ್ಮ ತಮ್ಮ ವಿಭಾಗಗಳಲ್ಲಿ ಒಳರೋಗಿಗಳು ಹಾಗೂ ಹೊರರೋಗಿಗಳಿಗೆ ಸಂಬಂಧಪಟ್ಟಂತೆ ಅಂಕಿಅಂಶಗಳನ್ನು ಪ್ರತಿ ಮಾಹೆ ಕಛೇರಿಗೆ ಕಳುಹಿಸುವಂತೆ ಪ್ರಾಧ್ಯಾಪಕರು/ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

11) ಬೋಧಕ ಆಸ್ಪತ್ರೆಯ ಒಳರೋಗಿ ವಿಭಾಗಕ್ಕೆ ದಾಖಲಾಗುವಂತಹ ರೋಗಿಗಳ ನೋಟ್‌ಶೀಟ್‌ನಲ್ಲಿ ಗೃಹವೈದ್ಯರುಗಳು ನೋಟ್ ಬರೆಯತ್ತಿದ್ದು, ಇನ್ನು ಮುಂದೆ ಸಂಬಂಧಪಟ್ಟ ಘಟಕದ ಹಿರಿಯ ವೈದ್ಯರುಗಳು ಕಡ್ಡಾಯವಾಗಿ ನೋಟ್ ಬರೆಯುವಂತೆ ನಿರ್ದೇಶಕರು ಸೂಚಿಸಿದರು.

12) ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ ತಮ್ಮ ವಿಭಾಗಗಳಲ್ಲಿ ಪ್ರತಿ ತಿಂಗಳು ಎಲ್ಲಾ ಸಿಬ್ಬಂದಿಗಳ ಸಭೆ ಕರೆದು, ಸಭೆಯ ನಡಾವಳಿಯನ್ನು ತಯಾರಿಸಿ ಕಛೇರಿಗೆ ತಪ್ಪದೆ ಕಳುಹಿಸಿಕೊಡಬೇಕೆಂದು ಈಗಾಗಲೇ ಹಲವಾರು ಬಾರಿ ಸುತ್ತೋಲೆ ಹೊರಡಿಸಿದ್ದರೂ ಸಹ ಕೆಲವು ವಿಭಾಗದವರು ಹೊರತು ಪಡಿಸಿ ಉಳಿದ ವಿಭಾಗದವರಾರೂ ಸಭೆ ಕರೆಯದಿರುವುದುನ್ನು ಎಲ್ಲಾ ವಿಭಾಗದ ಮುಖ್ಯಸ್ಥರಿಗೂ ತಿಳಿಸುತ್ತಾ, ಇನ್ನು ಮುಂದೆ ತಮ್ಮ ವಿಭಾಗದಲ್ಲಿ ತಪ್ಪದೆ ಸಭೆ ನಡೆಸಿ ನಡಾವಳಿಯನ್ನು ಕಛೇರಿಗೆ ತಪ್ಪದೆ ಸಲ್ಲಿಸಲು ಎಲ್ಲಾ ವಿಭಾಗದ ಮುಖ್ಯಸ್ಥರಿಗೂ ನಿರ್ದೇಶಕರು ಸೂಚಿಸಿದರು.

13) ವೈದ್ಯರುಗಳು ಪ್ರತ್ಯೇಕವಾಗಿ ವಾರ್ಡ್‌ರೌಂಡ್ಸ್ ಮಾಡುವ ಬದಲು ಘಟಕಕ್ಕೆ ಸಂಬಂಧಪಟ್ಟ ಎಲ್ಲಾ ವೈದ್ಯರುಗಳು ಒಟ್ಟಾಗಿ ವಾರ್ಡ್‌ರೌಂಡ್ಸ್‌ನ್ನು ಮಾಡುವಂತೆ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ಪ್ರಾಧ್ಯಾಪಕರುಗಳಿಗೆ ನಿರ್ದೇಶಕರು ಸೂಚಿಸಿರು.

14) ವೈದ್ಯರುಗಳು ಶಸ್ತ್ರಚಿಕಿತ್ಸಾ ಸಮಯದಲ್ಲಿ ರೋಗಿಗಳ ಒಳರೋಗಿ ದಾಖಲಾತಿ ಪತ್ರದಲ್ಲಿ ಗೃಹವೈದ್ಯರುಗಳ ಹತ್ತಿರ ನೋಟ್ ಬರೆಸುತ್ತಿದ್ದು, ನೋಟ್‌ನಲ್ಲಿ ಸರಿಯಾದ ರೀತಿಯಲ್ಲಿ ನಮೂದಿಸುತ್ತಿಲ್ಲದಿರುವುದರಿಂದ ಇನ್ನು ಮುಂದೆ ಶಸ್ತ್ರಚಿಕಿತ್ಸೆ ಮಾಡಿದ ವೈದ್ಯರುಗಳೆ ನೋಟ್‌ನ್ನು ಬರೆದು ಕಡ್ಡಾಯವಾಗಿ ಅವರ ಹೆಸರು ಮತ್ತು ಸಹಿಯನ್ನು ಹಾಕುವಂತೆ ಸೂಚಿಸಲು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರುಗಳಿಗೆ ನಿರ್ದೇಶಕರು ತಿಳಿಸಿದರು.

15) ಬೋಧಕ ಆಸ್ಪತ್ರೆಯ ಹೊರರೋಗಿ ವಿಭಾಗಗಳಿಗೆ (ಓ.ಪಿ.ಡಿ) ಬರುವಂತಹ ವೈದ್ಯರುಗಳು ಬೆಳಿಗ್ಗಿನ ಸಮಯದಲ್ಲಿ 10.30 ಆದರೂ ಓ.ಪಿ.ಡಿಗೆ ಹಾಜರಾಗದೆ ಗೃಹವೈದ್ಯರುಗಳು ಮಾತ್ರ ಬಂದು ಕೂರುತ್ತಿದ್ದು ರೋಗಿಗಳಿಗೆ ತೊಂದರೆಯಾಗುತ್ತಿರುವುದರಿಂದ ಇನ್ನು ಮುಂದೆ ಬೆಳಿಗ್ಗೆ 9.30ರ ಒಳಗೆ ಹಾಗೂ ಮದ್ಯಾಹ್ನ 2.15ರ ಒಳಗೆ ಘಟಕಕ್ಕೆ ಸಂಬಂಧಪಟ್ಟ ಹಿರಿಯ ವೈದ್ಯರುಗಳು ಓ.ಪಿ.ಡಿಗೆ ಹಾಜರಾಗಿ ಕರ್ತವ್ಯ ನಿರ್ವಹಿಸುವಂತೆ ತಿಳಿಸಲು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

16) ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳು ಕೇವಲ ಒಂದು ಖಾಸಗಿ ಆಸ್ಪತ್ರೆಯಲ್ಲಿ ಮಾತ್ರ ಪ್ರಾಕ್ಟೀಸ್ ಮಾಡಲು ಅವಕಾಶವಿರುತ್ತದೆ. ಕೆಲವು ವೈದ್ಯರುಗಳು ಒಂದಕ್ಕಿಂತ ಹೆಚ್ಚು ಖಾಸಗಿ ಆಸ್ಪತ್ರೆಗಳಲ್ಲಿ ಪ್ರಾಕ್ಟೀಸ್ ಮಾಡುತ್ತಿರುವುದು ಸರ್ಕಾರದ ಕಾರ್ಯದರ್ಶಿಗಳ ಗಮನಕ್ಕೆ ಬಂದಿರುವುದನ್ನು ಮೌಖಿಕವಾಗಿ ನಿರ್ದೇಶಕರ ಗಮನಕ್ಕೆ ತಂದಿರುತ್ತಾರೆ. ಆದುದರಿಂದ ಈ ವಿಷಯದ ಬಗ್ಗೆ ಕಾರ್ಯದರ್ಶಿಗಳು ಕ್ರಮಕೈಗೊಂಡಲ್ಲಿ ಸಂಬಂಧಪಟ್ಟ ವೈದ್ಯರುಗಳು ಇದಕ್ಕೆ ನೇರ ಹೊಣೆಗಾರರಾಗಿರುತ್ತಾರೆ ಎಂದು ಎಲ್ಲಾ ವಿಭಾಗದ ಪ್ರಾಧ್ಯಾಪಕರು/ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನಿರ್ದೇಶಕರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.

ಪ್ರತಿಯನ್ನು:

1. ವೈದ್ಯಕೀಯ ಅಧೀಕ್ಷಕರು, ಬೋಧಕ ಆಸ್ಪತ್ರೆ, ಮಿಮ್ಸ್ ಮಂಡ್ಯ ರವರ ಮಾಹಿತಿಗಾಗಿ.
2. ಎಲ್ಲಾ ವಿಭಾಗದ ಪ್ರಾಧ್ಯಾಪಕರು/ಮುಖ್ಯಸ್ಥರು, ಮಿಮ್ಸ್ ಮಂಡ್ಯ ಇವರ ಮಾಹಿತಿಗೆ
3. ಕಛೇರಿ ಪ್ರತಿ.